ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN.
(An Autonomous Medical Institution, Government of Karnataka)
SRI CHAMARAJENDRA HOSPITAL CAMPUS, HASSAN-573201.
WEB SITE: www.hims-hassan.org, Phone Fax No. 08172-231699 231599 Email directorhims@yahoo.com

ಸಂಖ್ಯೆ: ಹಿಮ್ಸ್/ಎಸ್‌ಸಿಹೆಚ್/ಡೈಟ್/26/2021-22 ದಿನಾಂಕ: 09.12.2021

# ಅಧಿಸೂಚನೆ

ವಿಷಯ: 2021-22ನೇ ಹಿಮ್ಸ್ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ದಪಡಿಸಿದ ಪತ್ಯಾಹಾರವನ್ನು ಸರಬರಾಜು ಪಡೆಯಲು ಆಹ್ವಾನಿಸಿರುವ ಇ-ಟೆಂಡರ್‌ಅನ್ನು ರದ್ದು ಪಡಿಸಿರುವ ಬಗ್ಗೆ.

ಉಲ್ಲೇಖ:1. ಟೆಂಡರ್ ಅಧಿಸೂಚನೆ ಸಂಖ್ಯೆ:ಹಿಮ್ಸ್/ಎಸ್‌ಸಿಹೆಚ್/ಡೈಟ್/26/2021-22, ದಿನಾಂಕ:19.07.2021

******

2021-22ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ದಪಡಿಸಿದ ಪತ್ಯಾಹಾರವನ್ನು ಎರಡು ವರ್ಷದ ಅವಧಿಗೆ ಇ-ಟೆಂಡರ್ ಮುಖಾಂತರ ಸರಬರಾಜು ಪಡೆಯಲು ಕ್ರಮವಾಗಿ ಉಲ್ಲೇಖ (1)ರಂತೆ ದಿನಾಂಕ:19.07.2021 ರಂದು ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು, ದಿನಾಂಕ:27.10.2021ರಂದು ಇ-ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಟೆಂಡರ್ ನಿರ್ಣಯಗಳನ್ನು ಅನುಮೋದನೆಗಾಗಿ ಕಡತವನ್ನು ಖರೀದಿ ಸಮಿತಿಯ ಮುಂದೆ ಮಂಡಿಸಲಾಗಿತ್ತು. ಸದರಿ ಇ-ಟೆಂಡರ್ ಅನುಮೊದನೆಗೆ ದಿನಾಂಕ:08.12.2021 ರಂದು ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. ಇವರ ಅಧ್ಯಕ್ಷತೆಯಲ್ಲಿ ನಡೆದ ಸಂಸ್ಥೆಯ 28ನೇ ಖರೀದಿ ಸಮಿತಿ ಸಭೆಯಲ್ಲಿ ಸಲ್ಲಿಕೆಯಾಗಿರುವ ಎಲ್-1 ದರಗಳು ಪರಿಶೀಲಿಸಲಾಗಿದ್ದು, ಈ ದರಗಳು ಮಾರುಕಟ್ಟೆ ದರಗಳಿಗೆ ಮತ್ತು ಬೇರೆ ಬೇರೆ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಲ್ಲಿ ಪಥ್ಯಾಹಾರವನ್ನು ಸರಬರಾಜು ಪಡೆಯುತ್ತಿರುವ ದರಗಳಿಗೆ ಹೋಲಿಸಿದಲ್ಲಿ ಅವಾಸ್ತವಿಕ ಕನಿಷ್ಠ ದರಗಳಾಗಿದ್ದು ಮತ್ತು ಬೇರೆ ಬೇರೆ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಲ್ಲಿ ಸರಬರಾಜು ಪಡೆಯುತ್ತಿರುವ ಏಕ ರೂಪ ಮೆನು ಇದ್ದರೂ ದರಗಳಲ್ಲಿ ವ್ಯಾಪಕ ವ್ಯೆತ್ಯಾಸ ಕಂಡುಬಂದಿರುವುದರಿಂದ ಸದರಿ ದರ ಅಂಗೀಕರಿಸಿದರೆ ಪರಿಣಮಕಾರಿಯಾಗಿ ಸಿದ್ದಪಡಿಸಿದ ಪತ್ಯಾಹಾರವನ್ನು ರೋಗಿಗಳಿಗೆ ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ಮತ್ತು ಎಲ್ಲಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಲ್ಲಿ ಏಕರೂಪದ ದರಗಳನ್ನು ನಿಗದಿಪಡಿಸಲು ಕೇಂದ್ರೀಕೃತ ಟೆಂಡರ್ ಆಹ್ವಾನಿಸಲು ಹಾಗೂ ಸದರಿ ಟೆಂಡರ್‌ನ್ನು ರದ್ದುಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.

ಮೇಲಿನ ಸಂಸ್ಥೆಯ 28ನೇ ಖರೀದಿ ಸಮಿತಿ ಸಭೆಯ ತೀರ್ಮಾನದಂತೆ ಈ ಕೆಳಕಂಡ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ.

1. ಟೆಂಡರ್ ಅಧಿಸೂಚನೆ ಸಂಖ್ಯೆ:ಹಿಮ್ಸ್/ಎಸ್‌ಸಿಹೆಚ್/ಡೈಟ್/26/2021-22, ದಿನಾಂಕ:19.07.2021

ಮುಖ್ಯ ಆಡಳಿತಾಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

## ಇ-ಟೆಂಡರ್ ರದ್ದು ಪಡಿಸಿರುವ ಬಗ್ಗೆ

ಹಿಮ್ಸ್ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ದಪಡಿಸಿದ ಪಥ್ಯಾಹಾರವನ್ನು ಸರಬರಾಜು ಪಡೆಯಲು ಆಹ್ವಾನಿಸಿದ ಇ-ಟೆಂಡರ್ ಅಧಿಸೂಚನೆ ಸಂಖ್ಯೆ: ಹಿಮ್ಸ್/ಟಿ.ಎಸ್(1)/Diet/26/2021-22, ದಿನಾಂಕ: 19.07.2021ನ್ನು ರದ್ದು ಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು https://www.eproc.karnataka.gov.in. ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಮುಖ್ಯ ಆಡಳಿತಾಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.